7. ಈ ಅಧಿಸೂಚನೆಯನ್ನು ದಿನಾಂಕ: 6-2-2002ರ ತನ್ನ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 1125 ಬಿಸಿಸಿ 01ರಲ್ಲಿ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗುತ್ತಿದೆ.

ರಾಜ್ಯದಲ್ಲಿ ಗ್ರಾಹಕರ ವೇದಿಕೆಗಳಲ್ಲಿ ಇತ್ಯರ್ಥವಾಗದ ಪ್ರಕರಣಗಳು

160(175) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಗ್ರಾಹಕರ ವೇದಿಕೆಗಳಿವೆ?

ಆ) ಈ ವೇದಿಕೆಗಳಲ್ಲಿ ಇತ್ಯರ್ಥಕ್ಕಾಗಿ ಕಾದಿರುವ ಪ್ರಕರಣಗಳ ಸಂಖ್ಯೆ ಎಷ್ಟು?

ಶ್ರೀ ರಾಮಲಿಂಗಾರೆಡ್ಡಿ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ಸಚಿವರು):

ಅ) ಕರ್ನಾಟಕ ರಾಜ್ಯದಲ್ಲಿ ಒಂದು ರಾಜ್ಯ ಆಯೋಗ ಮತ್ತು 31 ಜಿಲ್ಲಾ ಗ್ರಾಹಕ ವೇದಿಕೆಗಳಿವೆ. ಇವುಗಳಲ್ಲಿ ಬೆಂಗಳೂರು 3 ಮತ್ತು 4ನೇ ಹೆಚ್ಚುವರಿ ಮತ್ತು ಉಡುಪಿ ಜಿಲ್ಲಾ ವೇದಿಕೆಗಳನ್ನು ದಿನಾಂಕ: 26-2-2002ರ ಸರ್ಕಾರಿ ಆದೇಶ ಸಂಖ್ಯೆ: ಅನಾಸ 126 ಸಲಫ 97ರಲ್ಲಿ; ಮತ್ತು ಬಾಗಲಕೋಟೆ, ದಾವಣಗೆರೆ, ಗದಗ, ಹಾವೇರಿ, ಚಾಮರಾಜನಗರ ಮತ್ತು ಕೊಪ್ಪಳ ಜಿಲ್ಲೆಗಳಿಗೆ ತಲಾ ಒಂದು ಜಿಲ್ಲಾ ವೇದಿಕೆಯನ್ನು ದಿನಾಂಕ: 29-6-2002ರ ಸರ್ಕಾರಿ ಆದೇಶ ಸಂಖ್ಯೆ: ಅನಾಸ 128 ಸಲಫ 97 (ಭಾಗ), ಇದರಲ್ಲಿ ಮಂಜೂರು ಮಾಡಿದ್ದು, ಇವು ಇನ್ನೂ ಕಾರ್ಯಾರಂಭ ಮಾಡಬೇಕಾಗಿದೆ.

ಆ) ರಾಜ್ಯ ಆಯೋಗದಲ್ಲಿ ಮೇ, 2002ರ ಅಂತ್ಯಕ್ಕೆ 691 ಫಿರ್ಯಾದುಗಳು ಮತ್ತು 1812 ಮೇಲ್ಮನವಿಗಳು ಇತ್ಯರ್ಥಕ್ಕಾಗಿ ಬಾಕಿ ಇದ್ದವು.

22 ಜಿಲ್ಲಾ ಗ್ರಾಹಕ ವೇದಿಕೆಗಳಲ್ಲಿ ಮೇ, 2002ರ ಅಂತ್ಯಕ್ಕೆ ಒಟ್ಟು 6569, ಫಿರ್ಯಾದುಗಳು ಇತ್ಯರ್ಥಕ್ಕಾಗಿ ಬಾಕಿ ಇದ್ದವು.

ರಾಜ್ಯದಲ್ಲಿ ಶಿಶು ಮಾರಾಟ ಪ್ರಕರಣ

161(322) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಶುಮಾರಾಟ ಪ್ರಕರಣಗಳು ರಾಜ್ಯದಲ್ಲಿ ಇನ್ನೂ ಜರುಗುತ್ತಿವೆಯೇ?

ಆ) ಎಲ್ಲೆಲ್ಲಿ ಇಂತಹ ಪ್ರಕರಣಗಳು ಜಾಸ್ತಿ ನಡೆಯುತ್ತಿವೆ?

ಇ) ಈ ಆರೋಪಿಗಳನ್ನು ಹಿಡಿದು ಬಂದಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

ಈ) ತಮ್ಮ ಮಕ್ಕಳನ್ನು ಕಳೆದುಕೊಂಡ ಕುಟುಂಬಗಳಿಗೆ ಸೂಕ್ತ ಪರಿಹಾರ ಒದಗಿಸಲಾಗಿದೆಯೇ?